ನಿರ್ವಾಹಕ ಹುದ್ದೆಯ ಅವಧಿಯನ್ನು ಮುಂದುವರೆಯಿಸಿದ್ದು ಇರುತ್ತದೆ. ಇದನ್ನು ಜಾರಿ ಮಾಡ ಬೇಕು ಅಂತಾ ಮಾನ್ಯ ಉಪ ಕಾರ್ಯದರ್ಶಿಯವರು ಸಹಕಾರಿ ಇಲಾಖೆ ಇವರು ದೂರವಾಣಿ ಮೂಲಕ ತಿಳಿಸಿದ್ದರೂ ಸಹ ಇದನ್ನು ಉಲ್ಲಂಘಿಸಿ ಇಂಥ ಮಹತ್ವದ ಹುದ್ದೆಯ ದೊಡ್ಡ ಸರಕಾರಿ ಅಧಿಕಾರಿ ಗಳನ್ನು ಅವಹೇಳನಕರವಾದ ರೀತಿಯಲ್ಲಿ ಕಚೇರಿಯಿಂದಾ ಹೊರಹಾಕಿ, ಕೀಲಿಹಾಕಿರುತ್ತಾರೆ. ಇಂಥ ದೌರ್ಜನ್ಯ ತೋರಿಸಿದ ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು ಕೂಡಲೇ ಕಿತ್ತುಹಾಕಿ, ಸರಕಾರದ ಪಶಕ್ಕೆ ತೆಗೆದುಕೊಳ್ಳುವ ಈ ವಿಷಯವನ್ನು ಮಾನ್ಯ ಸಹಕಾರದ ಸಚಿವರ ಗಮನಕ್ಕೆ ತರ ಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು):—ಮಾನ್ಯ ಅಧ್ಯಕ್ಷರೇ, ಇದನ್ನು ಸಹಕಾರಿ ಸಚಿವರ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು:— ನಿಮಗೆ ಉತ್ತರ ಕಳಿಸಿಕೊಡುತ್ತಾರೆ.

ಶಾಮನೂರು ಗ್ರಾಮದ ಬಳಿ ಸಿಖ್ ವ್ಯಕ್ತಿಯೊಬ್ಬರ ಶವದ ಪತ್ತೆ ಕುರಿತು

ಶ್ರೀ ಕೆ. ಶಿವಮೂರ್ತಿ:— ಮಾನ್ಯ ಅಧ್ಯಕ್ಷರೇ, ಸಿಖ್ ವ್ಯಕ್ತಿಯೊಬ್ಬರ ಶವ ದಾವಣಗೆರೆ ತಾಲ್ಲೂಕಿನ ಶಾಮನೂರು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ಹಳ್ಳವೊಂದರಲ್ಲಿ ತೇಲುತ್ತಿದ್ದುದು ಪತ್ತೆ ಆಗಿದೆ. ಈ ಶವ ಪಂಜಾಬ್ ರಾಜ್ಯದ ವೈದ್ಯಕೀಯ ಹೆಣವೆಂದು ಪತ್ರಿಕೆಯಲ್ಲಿ ತಿಳಿಸಲಾಗಿದೆ. ಈ ಹೆಣವನ್ನು ತಂದು ಹಾಕುವಾಗ ಹಸಿರು ಕಾರಿನವರು ಚೀಲದ ಮೂಟೆಯೆನ್ನು ಹಳ್ಳಕ್ಕೆ ದೂಡುವಾಗ ಜನರು ನೋಡಿದಾಗ ಕಲ್ಲು ತೂರಿದರೆಂದು ತಿಳಿದುಬಂದಿದೆ. ಪ್ರಯುಕ್ತ ಈ ವಿಚಾರದ ಬಗ್ಗೆ ಯಾರು ಕೊಲೆಗಾರರು? ಈ ಹೆಣ ತರಲು ಯಾರು ಕಾರಣರು ಎಂಬುದನ್ನು ತಿಳಿಯಲು ಸದನದಲ್ಲಿ ಪ್ರಸ್ತಾಪಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು):—ಮಾನ್ಯ ಅಧ್ಯಕ್ಷರೇ.

ದಿನಾಂಕ ೧೫-೬-೧೯೯೦ ರಂದು ಶಾಮನೂರು ಗ್ರಾಮದ ಪಂಚದೇವಯ್ಯ ಮತ್ತು ಇತರ ಮೂವ್ವರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ರ ರಸ್ತೆಯ ಪಕ್ಕದಲ್ಲಿ, ಮಾರಂತಿ ಕಾರಿನಿಂದ ಶವ ವೊಂದನ್ನು ರಸ್ತೆಯ ಪಕ್ಕದ ಹಳ್ಳಕ್ಕೆ ಬಿಸಾಡಿದ್ದನ್ನು ಕಂಡ ಮೇರೆಗೆ, ಅವರು ಕೂಡಲೆ ದಾವಣಗೆರೆಯ ರೂರಲ್ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ತಿಳಿಸಿದ್ದು, ಮೊಕದ್ದಮೆ ಸಂಖ್ಯೆ ೨೨೦.೯೦ ಕಲಂ ೩೦೨, ೨೧೧ ಐಪಿಸಿ ಮೇರೆಗೆ ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳಲಾಗಿದೆ. ಈ ಬಗ್ಗೆ ಹರಿಹರದ ಸಿ.ಪಿ.ಐ ಅವರು ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ ೨೩.೬.೯೦ ರಂದು ಉಪ್ಪಾರಪೇಟೆ ಪೋಲೀಸ್ ಠಾಣೆಗೆ ೪೮ ವರ್ಷ ವಯಸ್ಸಿನ ಡಾ. ಪೈಯಾರ್ ಸಿಂಗ್ ಎಂಬುವರು ಕಾಣೆಯಾದ ಬಗ್ಗೆ ನೀಡಿದ ದೂರಿನ ಮೇರೆಗೆ ಮನುಷ್ಯ ಕಾಣೆಯಾದ ಬಗ್ಗೆ ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗಿ, ಡಾ. ಪೈಯಾರ್‌ಸಿಂಗ್‌ರವರು ದಿನಾಂಕ ೧೪.೬.೯೦ರಂದು ಬೆಂಗಳೂರಿಗೆ ರೂ. ೨,೩೦,೦೦೦-೦೦ ಹಣದೊಂದಿಗೆ, ಅವರ ಮಗನನ್ನು ಖಾಸಗಿ ವೈದ್ಯಕೀಯ ಕಾಲೇಜಿಗೊಂದಕ್ಕೆ ದಾಖಲು ಮಾಡಲು ಬಂದಿದ್ದು ಕಂಡುಬರುತ್ತದೆ. ದಾವಣಗೆರೆ ಹತ್ತಿರ ಕೆಂಡು ಬಂದಿರುವ ಶವವು ಡಾ. ಪೈಯಾರ್‌ಸಿಂಗ್ ಅವರದ್ದೆಂದು ಗುರುತಿಸಲಾಗಿದೆ.

ಈಗಾಗಲೆ, ಈ ಅಪರಾಧಕ್ಕೆ ಒಳಗಾಗಿರುವ ನಾಪತ್ತೆಯಾದ ಹಾಗೂ ಈ ಕೊಲೆ ಮೊಕದ್ದಮೆಗೆ ಉಪಯೋಗಿಸಿರುವ ಕಾರನ್ನು ಪತ್ತೆ ಹಚ್ಚಲಾಗಿದೆ, ಚಂದನ್ ಸಿಂಗ್, ಅಮೃತ್‌ಸರ್ ಮತ್ತು ಬರಬಿ ಆಲಿ ಹುಸೈನ್ ಬಕ್ರಿ ಎಂಬುವ ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಹಾಗೆಯೇ ಸದರಿ ಡಾ ಪೈಯಾರ್ ಸಿಂಗ್‌ರವರು ಇಳಿದುಕೊಂಡಿದ್ದ ರೂಂ ನಿಂದ ರೂ. ೫೦.೦೦೦-೦೦ ವನ್ನು ಹಾಗೂ ಈ ಅಪರಾಧಕ್ಕೆ ಒಳಗಾದ ಇಬ್ಬರು ವಿದ್ಯಾರ್ಥಿಗಳಿಂದ ೧,೪೦,೦೦೦ ರೂ. ಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಾಗೂ ತನಿಖೆಯೂ ಮುಂದುವರೆದಿದೆ.